ವ್ಯವಸ್ಥೆ. ವಿಮಾನ ನಿಲ್ದಾಣದ ನಿರ್ಗಮನ ದ್ವಾರದ ಪಕ್ಕದಲ್ಲೇ ರೈಲ್ವೆ ನಿಲ್ದಾಣವಿದೆ. ನಾರಿಟ ಎಕ್ಸ್‌ಪ್ರೆಸ್ ಎನ್ನುವ ಸುಸಜ್ಜಿತ ರೈಲು 1 ಗಂಟೆ 30 ನಿಮಿಷದಲ್ಲಿ ಟೋಕಿಯೊ ನಗರಕ್ಕೆ ತಲುಪಿಸುತ್ತದೆ. ಇಡೀ ನಗರದ ಸಂಚಾರದ ಆಧಾರ ಸ್ತಂಭವೇ ಇಲ್ಲಿನ ರೈಲ್ವೆ ವ್ಯವಸ್ಥೆ. ತುಸು ಕ್ಲಿಷ್ಟವಾದ ಮೆಟ್ರೊ ಅನಿಸಿದರೂ ಮುಂಬೈ ಲೋಕಲ್‌ನ ಪ್ರಯಾಣದ ಅನುಭವ ಇರುವವರಿಗೆ ಅಷ್ಟೇನೂ ಕಷ್ಟವಾಗಲಾರದು.

## ಸೆಂಸೋಜಿ ದೇವಸ್ಥಾನ

ಟೋಕಿಯೊ ನಗರದಲ್ಲಿರುವ ಅತಿ ಪುರಾತನ ಮತ್ತು ಪ್ರಸಿದ್ಧ ದೇವಾಲಯವೇ ಸೆಂಸೋಜಿ ದೇವಸ್ಥಾನ. ಈ ಬೌದ್ಧ ದೇವಾಲಯ ನಗರದ ಹೃದಯ ಭಾಗದಲ್ಲಿರುವ ಅಸಕುಸ ಪ್ರದೇಶದಲ್ಲಿದೆ. ದೇವಾಲಯದ ಪ್ರವೇಶ ದ್ವಾರದಲ್ಲಿ ಎರಡು ಬೃಹದಾಕಾರದ ಕಾವಲು ಪ್ರತಿಮೆಗಳಿವೆ. ಪ್ರವೇಶ ದ್ವಾರದಿಂದ ಮುಖ್ಯ ದೇವಾಲಯದ ಎರಡೂ ಬದಿಗಳಲ್ಲಿ ವ್ಯಾಪಾರದ ಅಂಗಡಿಗಳಿವೆ. ದೇವಾಲಯದ ವಿನ್ಯಾಸ ಮತ್ತು ಸುತ್ತಲಿನ ಪರಿಸರ ನೋಡಲು ತುಂಬಾ ಸುಂದರವಾಗಿದೆ. ಟೋಕಿಯೊ ನಗರದ ತುಂಬಾ ಇಂತಹ ಅನೇಕ ಪುರಾತನ ದೇವಾಲಯಗಳಿವೆ. ವಿನ್ಯಾಸ ಮತ್ತು ಬಣ್ಣಗಳಲ್ಲಿ ಸಾಮಾನ್ಯವಾಗಿ ಈ ದೇವಾಲಯಗಳೆಲ್ಲವೂ ಒಂದಕ್ಕೊಂದು ಹೋಲುತ್ತವೆ.

ಶಿಸ್ತು, ಸಹನೆ, ವಿನಯವಂತಿಕೆ ಮತ್ತು ಮೌನ ಜಪಾನಿಗರ ರಕ್ತದಲ್ಲೇ ಬೆರೆತಂತಿದೆ. ಇದಕ್ಕೆ ಪ್ರತೀಕವಾಗಿರುವುದೇ ಟೋಕಿಯೊ ನಗರದಲ್ಲಿ ಹರಿಯುತ್ತಿರುವ ಅನೇಕ ನದಿಗಳು. ನಗರದ ಎಲ್ಲಾ ಕಡೆಗಳಲ್ಲಿ ಕಾಣಸಿಗುವ ಅನೇಕ ನದಿಗಳಲ್ಲಿ ಸುಮಿದ, ಅರಕಾವ ಮತ್ತು ತಮ ನದಿಗಳು ಪ್ರಮುಖವಾದವು. ಸೆಂಸೋಜಿ ದೇವಾಲಯದಿಂದ ಸ್ಕೈ ಟ್ರೀ ಟವರ್‌ಗೆ 15 ನಿಮಿಷಗಳ ಕಾಲು ನಡಿಗೆ. ಮಧ್ಯದಲ್ಲಿ ಸಿಗುವ ಸುಮಿದ ನದಿ ಸೇತುವೆ ನಯನ ಮನೋಹರವಾಗಿದೆ. ನಗರದ ಮಧ್ಯದಲ್ಲೇ ಹರಿಯುತ್ತಿದ್ದರೂ ನದಿಯ ಸ್ವಚ್ಛತೆ ಕಾಪಾಡಿಕೊಂಡು ಬಂದಿರುವುದು ಜಪಾನಿಗರ ಸ್ವಚ್ಛತೆಯ ಕಾಳಜಿಗೆ ಸಾಕ್ಷಿಯಂತಿದೆ.


ಮಕ್ಕಳ ರಕ್ಷಣೆಗೆ ಪ್ರಾರ್ಥಿಸಿ ಪೋಷಕರು ಹಸೆ ದೇರಾ ದೇಗುಲದಲ್ಲಿ ಪ್ರತಿಷ್ಠಾಪಿಸಿರುವ ವಿಗ್ರಹಗಳು

## ಎತ್ತರದ ಟವರ್ ಸ್ಕೈ ಟ್ರೀ

ಟೋಕಿಯೊ ಸ್ಕೈ ಟ್ರೀ ಪ್ರಪಂಚದಲ್ಲೇ ಅತಿ ಎತ್ತರದ ಟವರ್. ಪ್ರಪಂಚದಲ್ಲೇ ಮೂರನೇ ಅತಿ ಎತ್ತರದ ಕಟ್ಟಡ. ಇದರ ಎತ್ತರ 634 ಮೀಟರ್. ಆಧುನಿಕ ತಂತ್ರಜ್ಞಾನದಿಂದ 2012ರಲ್ಲಿ ನಿರ್ಮಾಣವಾದ ಈ ಟವರ್‌ನ ವಿಶೇಷತೆ ಎಂದರೆ ಇದರಲ್ಲಿ ಎರಡು ಅಂತಸ್ತುಗಳ ನಿರ್ಮಾಣವಿದೆ. ಲಿಫ್ಟ್‌ನ ಮೂಲಕ ಮೊದಲು 350 ಮೀಟರ್‌ವರೆಗೂ ನಂತರ 450 ಮೀಟರ್‌ವರೆಗೂ ಹೋಗಲು ಅವಕಾಶವಿದೆ. ಈ ಎರಡೂ ಅಂತಸ್ತುಗಳಲ್ಲಿ ಗಾಜಿನಿಂದ ನಿರ್ಮಿಸಿದ, 360 ಡಿಗ್ರಿ ವೀಕ್ಷಿಸಲು ಬೃಹದಾಕಾರದ ಸ್ಥಳವನ್ನು ಕಲ್ಪಿಸಲಾಗಿದೆ. ಇಲ್ಲಿಂದ ಟೋಕಿಯೊ ನಗರವನ್ನು ವೀಕ್ಷಿಸಬಹುದು. ಎತ್ತರದಿಂದ ನಗರವನ್ನು ವೀಕ್ಷಿಸುವ ಅನುಭವ ವರ್ಣಿಸಲಸಾಧ್ಯ. ದೇಶವಿದೇಶದಿಂದ ಜನರು ಇಲ್ಲಿಗೆ ಆಗಮಿಸಿ ಟೋಕಿಯೊ ನಗರದ ಸೌಂದರ್ಯವನ್ನು ಸವಿಯುತ್ತಾರೆ.

## ರೋಮಾಂಚಕ ಮೌಂಟ್ ಫ್ಯೂಜಿ

ಮೌಂಟ್ ಫ್ಯೂಜಿ ಜಪಾನ್‌ನ ಅತಿ ಎತ್ತರದ ಪರ್ವತ. ಜೀವಂತ ಜ್ವಾಲಾಮುಖಿಯಿಂದ ಸುಟ್ಟು ಕರಕಲಾಗಿರುವ ಈ ಪರ್ವತವನ್ನು ವೀಕ್ಷಿಸುವುದು ನಿಜಕ್ಕೂ ರೋಮಾಂಚನ. 3776 ಮೀಟರ್ ಎತ್ತರವಿರುವ ಈ ಪರ್ವತದಲ್ಲಿ 1708ರಲ್ಲಿ ಕೊನೆಯ ಬಾರಿ ಜ್ವಾಲಾಮುಖಿ ಸ್ಫೋಟಗೊಂಡಿತ್ತು. ನಾನು ಈ ಸ್ಥಳಕ್ಕೆ ಭೇಟಿ ನೀಡಿದ್ದು ಸೆಪ್ಟೆಂಬರ್ ಕೊನೆಯ ವಾರದಲ್ಲಿ. ಸಾಮಾನ್ಯವಾಗಿ ನವೆಂಬರ್ ನಂತರದ ಸಮಯದಲ್ಲಿ ಹಿಮಪಾತವಾಗಿ ಜ್ವಾಲಾಮುಖಿ ಪರ್ವತ ಇನ್ನೂ ಆಕರ್ಷಕವಾಗಿ ಕಾಣಿಸುತ್ತದೆ.

ಟೋಕಿಯೊ ನಗರದಿಂದ 130 ಕಿ.ಮೀ. ದೂರದಲ್ಲಿರುವ ಮೌಂಟ್ ಫ್ಯೂಜಿ ತಲುಪಲು ಸುಮಾರು 3 ಗಂಟೆಗಳು ಬೇಕು. ಮೌಂಟ್ ಫ್ಯೂಜಿ ಪರ್ವತವನ್ನು ನೋಡಲು ಅನೇಕ ವೀಕ್ಷಣಾ ಪಾಯಿಂಟ್‌ಗಳಿವೆ. ಅವುಗಳಲ್ಲಿ ಮುಖ್ಯವಾದದ್ದು ಮೌಂಟ್ ಫ್ಯೂಜಿ 5ನೇ ಸ್ಟೇಷನ್. 2300 ಮೀಟರ್ ಎತ್ತರದಲ್ಲಿರುವ ಐದನೇ ಸ್ಟೇಷನ್‌ನ ಉಷ್ಣಾಂಶ ಸುಮಾರು ಐದು ಡಿಗ್ರಿ ಇಷ್ಟಿತ್ತು. ಮೋಡ ಮಂಜಿನ ಮಧ್ಯದಲ್ಲಿ ದರ್ಶನ ಕೊಡಲು ಕಣ್ಣಾಮುಚ್ಚಾಲೆಯಾಡುವ ಮೌಂಟ್ ಫ್ಯೂಜಿ ಜಪಾನ್‌ನ ಪ್ರವಾಸಿ ತಾಣಗಳಲ್ಲಿ ಅತಿ ಪ್ರಮುಖವಾದದ್ದು. ಟೋಕಿಯೊದಿಂದ 3 ಗಂಟೆಗಳ ಪ್ರಯಾಣವಾದರೂ ಎಲ್ಲೆಡೆ ಹಸಿರು, ಬೆಟ್ಟ, ಗುಡ್ಡ, ನದಿ, ಪರ್ವತಗಳಿಂದ ಕೂಡಿರುವ ದಾರಿಯಾದ್ದರಿಂದ ಎಲ್ಲಿಯೂ ಬೇಸರವೆನಿಸದು.


ಪ್ರಪಂಚದ ಮೂರನೇ ಅತಿ ಎತ್ತರದ ಕಟ್ಟಡ ಸ್ಕೈ ಟ್ರೀ

## ಮೈಜಿ ಜಿಂಗೂ ದೇವಾಲಯ

ಜಪಾನ್‌ನಲ್ಲಿ ಪ್ರಮುಖವಾಗಿ ಎರಡು ಸಮುದಾಯಗಳಿವೆ. ಬೌದ್ಧ ಮತ್ತು ಶಿಂಟೋ. ಮೈಜಿ ಜಿಂಗೂ ಶಿಂಟೋ ಸಮುದಾಯದ ದೇವಾಲಯ. ಟೋಕಿಯೊ ನಗರದ ಮಧ್ಯದಲ್ಲಿ ಸುಮಾರು 70 ಹೆಕ್ಟೇರ್ ಕಾಡಿನ ಮಧ್ಯದಲ್ಲಿರುವ ಸುಂದರ ದೇವಾಲಯ ಮೈಜಿ ಜಿಂಗೂ. 1920ರಲ್ಲಿ ನಿರ್ಮಾಣಗೊಂಡ ಈ ದೇವಾಲಯದ ವಿನ್ಯಾಸವೇ ತುಂಬಾ ವಿಶೇಷ. ದಟ್ಟ ಕಾಡಿನ ಮಧ್ಯದಲ್ಲಿರುವ ಈ ದೇವಾಲಯದ ಇನ್ನೊಂದು ವಿಶೇಷವೆಂದರೆ ಈ ಕಾಡು ಮಾನವ ನಿರ್ಮಿತ ಅರಣ್ಯ. 1920ರಲ್ಲಿ ಸುಮಾರು ಒಂದು ಲಕ್ಷ ಮರಗಳನ್ನು ಇಲ್ಲಿ ನೆಡಲಾಗಿತ್ತು.

## ಶಿಬುಯಾ ಕ್ರಾಸಿಂಗ್

ಟೋಕಿಯೊ ನಗರದಲ್ಲಿರುವ ಇನ್ನೊಂದು ಅತ್ಯಂತ ಆಸಕ್ತಿಕರ ಸ್ಥಳವೆಂದರೆ ಶಿಬುಯಾ ಕ್ರಾಸಿಂಗ್. ಅತ್ಯಂತ ಜನನಿಬಿಡ ಪ್ರದೇಶವಾದ ಶಿಬುಯಾದಲ್ಲಿ ಐದು ಮುಖ್ಯ ರಸ್ತೆಗಳು ಸೇರುವ ಸರ್ಕಲ್ ಒಂದಿದೆ. ಅಲ್ಲಿ ಒಂದೇ ಬಾರಿಗೆ ಎಲ್ಲಾ ರಸ್ತೆಯ ಸಂಚಾರವನ್ನು ನಿಲ್ಲಿಸಿ, ಜನರಿಗೆ ರಸ್ತೆ ದಾಟಲು ಎಲ್ಲಾ ಮಾರ್ಗದಿಂದ ಅವಕಾಶ ಕಲ್ಪಿಸಲಾಗುತ್ತದೆ. ಆದ್ದರಿಂದ ಈ ಸ್ಥಳಕ್ಕೆ